# ರಾಮಕೃಷ್ಣ ಸಂಘದ ಜಾಗತಿಕ ಆಯಾಮ

ಸ್ವಾಮಿ ಗೌತಮಾನಂದ

## ರಾಮಕೃಷ್ಣ ಭಾವಧಾರೆ

**ಜಾ**ಗತೀಕರಣ ಈಗ ಪ್ರಪಂಚದಾದ್ಯಂತ ಮನೆಮಾತಾಗಿ, ಎಲ್ಲ ಕಡೆ ಚರ್ಚಿಸಲ್ಪಡುತ್ತಿದೆ. ಅದು ಹೇಗೋ ಕೇವಲ ಈ ಚರ್ಚೆಗಳಲ್ಲಿ ಆರ್ಥಿಕ ಅಂಶವನ್ನು ಮಾತ್ರವೇ ಎತ್ತಿಹಿಡಿಯಲಾಗುತ್ತಿದೆ. ಆದರೆ, ಜಾಗತೀಕರಣಕ್ಕೆ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ನೈತಿಕ ಮತ್ತು ಆಧ್ಯಾತ್ಮಿಕ ಆಯಾಮಗಳೂ ಇವೆ. ಅವರಲ್ಲೂ ವಿಶೇಷವಾಗಿ ಆಧ್ಯಾತ್ಮಿಕ ಅಂಶವನ್ನು ಈ ಚರ್ಚೆಯಲ್ಲಿ ಕಡೆಗಣಿಸಲಾಗಿದೆ. ಅದಕ್ಕಾಗಿ **'ಎಲ್ಲೆಲ್ಲೂ ಮಾನವನ ಆಧ್ಯಾತ್ಮಿಕ ಉದ್ದೀಪನೆ'** ಯನ್ನು ಗುರಿಯಾಗಿ ಉಳ್ಳ ರಾಮಕೃಷ್ಣ ಭಾವಧಾರೆಯ ವಿಚಾರವನ್ನು ಇಲ್ಲಿ ನಾವು ಪ್ರಸ್ತುತ ಪಡಿಸುತ್ತಿದ್ದೇವೆ. "ಏಳು, ಎದ್ದೇಳು, ಗುರಿಯನ್ನು ಮುಟ್ಟುವವರೆಗೂ ನಿಲ್ಲದಿರು' ಎಂಬ ಸ್ವಾಮಿ ವಿವೇಕಾನಂದರ ತೂರ್ಯವಾಣಿ ನಮಗೆ ಈಗಾಗಲೇ ಗೊತ್ತು. ಇಲ್ಲಿ 'ಗುರಿ' ಎಂದರೆ 'ಆಧ್ಯಾತ್ಮಿಕ ಉದ್ದೀಪನೆ'; ಅಂದರೆ, ಜೀವ, ಜಗತ್ತು, ಮತ್ತು ಈಶ್ವರ ಬೇರೆ ಬೇರೆಯಲ್ಲ ಎಂಬ ಮಾನವನ ದಿವ್ಯಜ್ಞಾನ. ಇದು 'ಗುರಿ' ಎಂಬ ಪದಕ್ಕೆ ಸ್ವಾಮೀಜಿ ಕೊಡುವ ಅರ್ಥ.

ಇಂಗ್ಲೆಂಡಿನ ಬಕಿಂಗ್‌ಹ್ಯಾಮ್‌ಶೈರ್‌ನಲ್ಲಿರುವ ರಾಮಕೃಷ್ಣ ವೇದಾಂತ ಕೇಂದ್ರದ ಹಿಂದಿನ ಅಧ್ಯಕ್ಷರಾದ ಸ್ವಾಮಿ ಭವ್ಯಾನಂದರು ಒಮ್ಮೆ ಭಾರತಕ್ಕೆ ಬರುವಾಗ, ಮಾರ್ಗಮಧ್ಯದಲ್ಲಿ, ಪೋಪ್ ಅವರನ್ನು ನೋಡಲು ರೋಮ್‌ಗೆ ಹೋದರು. ಅವರು ತಮ್ಮ ಪರಿಚಯ ಮಾಡಿಕೊಳ್ಳುತ್ತಾ, "ನಾನು ಪ್ರಪಂಚದ ಸಂನ್ಯಾಸಿ ಸಂಸ್ಥೆಗಳಲ್ಲಿ ಇತ್ತೀಚಿನದಾದ, ಅತ್ಯಂತ ಕಿರಿಯದಾದ ಮತ್ತು ಬಡ ಸಂಸ್ಥೆಗೆ ಸೇರಿದವನು" ಎಂದು ಹೇಳಿದರು. ಪೋಪ್ ಅವರು, ನಗುತ್ತಾ, "ಹೌದು, ಹೌದು. ಆದರೆ, ನನಗೆ ತಿಳಿದಂತೆ ಅತ್ಯಂತ ಶಕ್ತಿಶಾಲಿಯಾದುದು ಕೂಡ!" ಎಂದು ಸೇರಿಸಿದರು. ಪೋಪ್ ಅವರು ಸೂಚಿಸಿದ ಶಕ್ತಿ ಯಾವುದೆಂದರೆ, ರಾಮಕೃಷ್ಣ ಸಂಘದ ಪ್ರತಿ ಸದಸ್ಯರನ್ನೂ ಆಧ್ಯಾತ್ಮಿಕ ಮಾರ್ಗಕ್ಕೆ ಪ್ರೇರೇಪಿಸುವ ಮತ್ತು ಅವರ ಜೀವನದಲ್ಲಿ ಕಂಡುಬರುವ ಭಗವತ್ಪ್ರೇಮ, ವೈರಾಗ್ಯ ಹಾಗೂ ಸೇವೆಯಲ್ಲಿ ವ್ಯಕ್ತವಾಗುವ ಆಧ್ಯಾತ್ಮಿಕ ಶಕ್ತಿ.

## ಜಾಗತಿಕ ಸಮಸ್ಯೆ

ಪಾಶ್ಚಾತ್ಯ ಶಕ್ತಿಗಳು ಭಾರತೀಯರನ್ನು ಪ್ರಾಪಂಚಿಕತೆಯ ವಾದದಿಂದ ಮೆಟ್ಟುಕೊಂಡಿದ್ದ ಕಾಲದಲ್ಲಿ ಶ್ರೀರಾಮಕೃಷ್ಣರ ಅವತರಣವಾಯಿತು. ಪ್ರಕೃತಿಯಲ್ಲಿ ಇರುವುದೆಲ್ಲವೂ, ಮನುಷ್ಯರೂ ಕೂಡ, ಯಾಂತ್ರಿಕ ನಿಯಮಗಳನ್ನು ಮಾತ್ರವೇ ಅನುಸರಿಸುವುವು; ಮಾನವನ ಸ್ವಭಾವ ಆತ್ಮವಲ್ಲ, ವಸ್ತುಗಳಂತೆ ಸ್ಥೂಲ ಎಂದು ವಿಜ್ಞಾನ ಸಾಬೀತು ಮಾಡಿದೆ ಎಂಬುದು ಆ ವಾದವನ್ನು ಮುಂದಿಡುವವರ ಅಭಿಪ್ರಾಯ. ಅಂದರೆ, ಮಾನವನು ಕೇವಲ ದೇಹ–ಮನಸ್ಸುಗಳ ಸಮ್ಮಿಶ್ರಣ; ಸಾವಿನಿಂದಾಚೆಗೆ ಜೀವನವಿಲ್ಲ. ಇಂದ್ರಿಯಗಳಿಗೆ ಎಷ್ಟು ಗೋಚರವಾಗುವುದೊ ಅದಷ್ಟೆ ಸತ್ಯ ಎನ್ನುವುದೇ ಈ ಪಾಶ್ಚಾತ್ಯ ಭೌತವಾದಿಗಳ ವಾದ. ಆದುದರಿಂದ, **ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್**– 'ಜೀವನದಲ್ಲಿ ಸುಖಲೋಲುಪರಾಗಿರಿ ಮತ್ತು ಸಾಲಮಾಡಿಯಾದರೂ ತುಪ್ಪ ತಿನ್ನಿ' ಎನ್ನುವುದು ಅವರ ಜೀವನತತ್ತ್ವವಾಗಿತ್ತು.

## ಭೌತಿಕತೆಯ ಪ್ರವಾಹಕ್ಕೆ ತಡೆ

ಈ ವಾದದ ಸವಾಲನ್ನು ಸಮರ್ಥವಾಗಿ ಎದುರಿಸುವುದು ಹೇಗೆ? ಒಂದು ಕಾರ್ಯಕ್ಕೆ ಇನ್ನೊಂದು ಕಾರ್ಯ ಮಾತ್ರವೇ ತಕ್ಕ ಉತ್ತರವಾದೀತು. ಮನುಷ್ಯನಾದವನು ಜೀವಾಣುವಿನಿಂದ ವಿಕಾಸವಾದ ಕೇವಲ ಪಂಚಭೂತಗಳಿಂದಾದ ದೇಹವೆಂದು ನಿರೀಶ್ವರವಾದವು ದೃಢವಾಗಿ ಹೇಳುವುದಾದರೆ, ಮನುಷ್ಯನು ಶುದ್ಧಾತ್ಮನಾಗಿದ್ದಾನೆ ಮತ್ತು ಅವನ ನಿಜಸ್ಥಿತಿಯಲ್ಲಿ ಅವನು ಸತ್–ಚಿತ್–ಆನಂದ ಎಂದು ಸಾಧಿಸಿ ತೋರಿಸುವುದರ ಮೂಲಕವೆ ಈ ವಾದವನ್ನು ಮುರಿಯಬೇಕಾಗುತ್ತದೆ. ಅಂತಹ ಅದ್ಭುತ ಕಾರ್ಯವನ್ನು ಮಾಡಿದವರು ಶ್ರೀರಾಮಕೃಷ್ಣ ಪರಮಹಂಸರು.

> **ಸ್ವಾಮಿ ವಿವೇಕಾನಂದರಿಂದ 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ಧ್ಯೇಯದೊಂದಿಗೆ ಸ್ಥಾಪಿತವಾದ ಶ್ರೀರಾಮಕೃಷ್ಣ ಮಹಾಸಂಘವು ಸದ್ದುಗದ್ದಲವಿಲ್ಲದೆ ಮೆಲ್ಲ ಮೆಲ್ಲನೆ ಕ್ರಮಕ್ರಮೇಣ ತನ್ನ ಮಾತೃಸದೃಶವಾದ ಕರುಣಾಬಾಹುಗಳಿಂದ ಪ್ರಪಂಚವನ್ನೆಲ್ಲಾ ತಬ್ಬುತ್ತಿದೆ.**
>
> **–ಕುವೆಂಪು**

ಶ್ರೀರಾಮಕೃಷ್ಣರು ವೇದಕಾಲದ ಋಷಿಗಳ ಮಾರ್ಗವನ್ನು ಅನುಸರಿಸುವ ಮೂಲಕ ಆಧುನಿಕ ಭೌತವಾದದ ಈ ಕಠಿಣ ಸವಾಲನ್ನು ಎದುರಿಸಿದರು. ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತಮಾರ್ಗಗಳಲ್ಲಿನ ಎಲ್ಲ ವಿಶೇಷ ಸಾಧನೆಗಳನ್ನು ಸ್ವತಃ ಆಚರಿಸಿ ತೋರಿಸಿದರು. ಅದಲ್ಲದೆ, ಕ್ರೈಸ್ತ ಮತ್ತು ಮುಸ್ಲಿಂ ಸೂಫಿ ಮತಗಳನ್ನೂ ಅನುಸರಿಸಿದರು. ಹೀಗೆ ಅವರು ಎಲ್ಲ ಧರ್ಮಗಳು, ವೇದಗಳು 'ಬ್ರಹ್ಮ' ಎಂದು ಕರೆದಿರುವ ಏಕೈಕ ವಸ್ತುವಾದ ಭಗವಂತನನ್ನು ಸೇರುವ ಮಾರ್ಗಗಳು ಎಂಬ ಮಹಾಸತ್ಯವನ್ನು ಸಾಕ್ಷಾತ್ಕರಿಸಿಕೊಂಡರು. **ಏಕಂ ಸತ್ ವಿಪ್ರಾಃ ಬಹುಧಾ ವದಂತಿ** – "ಭಗವಂತ ಒಬ್ಬನೇ, ಜ್ಞಾನಿಗಳು ಹಲವು ಹೆಸರುಗಳಿಂದ ಅವನನ್ನು ಕರೆದಿರುವರು" ಎಂಬ ಋಗ್ವೇದದ ಮಾತು ಅವರ ಜೀವನದಲ್ಲಿ ಅನುರಣಿತವಾಗಿದೆ. ಹೀಗೆ ಶ್ರೀರಾಮಕೃಷ್ಣರು ಪ್ರಪಂಚದಾದ್ಯಂತ ಹಬ್ಬುತ್ತಿದ್ದ ಭೌತವಾದದ ಪ್ರಸಾರಕ್ಕೆ ಪರಿಣಾಮಕಾರಿ ತಡೆಯನ್ನು ಒಡ್ಡಿದರು.

## ವಿಶ್ವವ್ಯಾಪಕ ಆಧ್ಯಾತ್ಮಿಕ ವಿಧಾನ

ಶ್ರೀರಾಮಕೃಷ್ಣರು ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಬಳಿಕ,

ಸನಾತನವಾದ ವೇದಧರ್ಮದ ಮಾರ್ದನಿಯೇ ಆದ ತಮ್ಮ ಮಾರ್ಗದಲ್ಲಿ ನಡೆದರೆ, ಎಲ್ಲರೂ ಭಗವಂತನನ್ನು ಪಡೆಯಬಹುದು ಎಂದು ಸಾರಿದರು. ಆ ಮಾರ್ಗ ಯಾವುದು? ಅವು ನಾಲ್ಕು ಯೋಗಗಳನ್ನು ಒಳಗೊಂಡ ಮಾರ್ಗ – ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮತ್ತು ರಾಜಯೋಗ. ಪ್ರತಿಯೊಬ್ಬ ಸಾಧಕನೂ, ಅವನವನ ಸ್ವಭಾವ ಮತ್ತು ಯೋಗ್ಯತೆಗೆ ಅನುಸಾರವಾಗಿ ಇವುಗಳಲ್ಲಿ ಒಂದನ್ನು ಅಥವಾ ಕೆಲವನ್ನು ಆರಿಸಿಕೊಳ್ಳಬಹುದು. 'ಧರ್ಮ' ಎಂದರೆ ಸಾಕ್ಷಾತ್ಕಾರ, ಅನುಭವ; ಕೇವಲ ನಂಬಿಕೆ ಅಥವಾ ತತ್ತ್ವವಲ್ಲ ಎಂದು ಶ್ರೀರಾಮಕೃಷ್ಣರು ಸಾರಿರುವರು. ಯಾವುದು ನಿಜವಾಗಿ ಅಸ್ತಿತ್ವದಲ್ಲಿ ಇರುವುದೋ ಅದನ್ನು ಒಂದು ಸೂಕ್ತ ವಿಧಾನದಿಂದ ಅನುಭವಿಸಬಹುದು. ಸರಿಯಾದ ಮಾರ್ಗವು ಆ ಅನುಭವದ ಕಡೆ ಪ್ರತಿಯೊಬ್ಬರನ್ನೂ ಖಂಡಿತವಾಗಿ ಕೊಂಡೊಯ್ಯುವುದು. ಧರ್ಮವೇ ಈ ಮಾರ್ಗ. ಹೀಗೆ ಶ್ರೀರಾಮಕೃಷ್ಣರು ಧರ್ಮವನ್ನು ಒಂದು ಜಾಗತಿಕ ವಿಷಯವನ್ನಾಗಿ ಮಾಡಿ ತೋರಿಸಿದರು. ಈ ನಿಟ್ಟಿನಲ್ಲಿ ನೋಡುವುದಾದರೆ, ಧರ್ಮವನ್ನು 'ಚೈತನ್ಯದ ವಿಜ್ಞಾನ' ಎಂದೂ ಹೇಳಬಹುದು. "ಭಗವಂತನನ್ನು ಯೋಗಗಳ ಅಭ್ಯಾಸದಿಂದ ಸಾಕ್ಷಾತ್ಕರಿಸಿಕೊ" ಎನ್ನುವುದೇ ಆಧುನಿಕ ಮಾನವನಿಗೆ ಶ್ರೀರಾಮಕೃಷ್ಣರು ನೀಡುವ ಸಂದೇಶ.

## ವಿಶ್ವಧರ್ಮದ ಉದಯ

ಹೀಗೆ ಶ್ರೀರಾಮಕೃಷ್ಣರು ತೋರಿದ ಧರ್ಮ, ವಿಶ್ವಧರ್ಮ. ಯಾವುದೇ ಜಾಗತಿಕ ವಿಷಯವೆಂಬುದು ಹೇಗೆ ಎಲ್ಲ ಪ್ರದೇಶಗಳ ಎಲ್ಲೆಯನ್ನೂ ಮೀರಿ ಹೋಗುವುದೊ ಹಾಗೆಯೇ ಶ್ರೀರಾಮಕೃಷ್ಣರ "ಧರ್ಮ ಸಮನ್ವಯ" ಮತ್ತು "ನರಸೇವೆಯನ್ನು ನಾರಾಯಣ ಸೇವೆ ಎಂದು ಮಾಡಿ" ಎಂಬ ಸಂದೇಶಗಳು ಕೂಡ ಎಲ್ಲ ಪ್ರಾದೇಶಿಕ ಎಲ್ಲೆಗಳನ್ನೂ ಮೀರಿ ನಿಂತಿವೆ. ಈ ಸಂದೇಶದ ಸಾಮಾಜಿಕ ಉದ್ದೇಶಗಳು ಎರಡು. ಮೊದಲನೆಯದು ಮತ ಮತ್ತು ಧರ್ಮಗಳ ನಡುವಣ ವೈಷಮ್ಯಗಳನ್ನು ಅಳಿಸಿ ಹಾಕುವುದು; ಮತ್ತು ಎರಡನೆಯದು ಜಾತಿ, ವರ್ಣ, ಬುಡಕಟ್ಟು, ಲಿಂಗಭೇದಗಳನ್ನು ತೊಡೆದುಹಾಕುವುದು. ರಾಮಕೃಷ್ಣ ಸಂಘವು, "ಒಬ್ಬನ ಸ್ವಭಾವದಂತೆ ಜಾತಿಯೇ ಹೊರತು ಅವನ ಜನ್ಮದಿಂದಲ್ಲ" ಎಂಬ ಶುದ್ಧ ವೇದೋಕ್ತ ಮಾರ್ಗವನ್ನು ಅನುಸರಿಸುತ್ತಿದೆ. ಹೀಗಾಗಿ, ಶ್ರೇಷ್ಠ ಮಟ್ಟದ ಈ ಸಂನ್ಯಾಸಿ ಸಂಘವನ್ನು ಸೇರಲಿಚ್ಛಿಸುವ ಎಲ್ಲ ಜಾತಿ ಮತ್ತು ಧರ್ಮಗಳ ಪುರುಷರು ಮತ್ತು ಸ್ತ್ರೀಯರನ್ನು, ಸಂಘವು ಆಧ್ಯಾತ್ಮಿಕ ಜೀವನಕ್ಕೆ ತೊಡಗಿಸುತ್ತದೆ. ಸಂಘವು ಸ್ತ್ರೀಯರಿಗೆ, ಶೂದ್ರರಿಗೆ, ಹಿಂದುಳಿದ ವರ್ಗದವರಿಗೆ, ಒಟ್ಟಾರೆ, ಹಿಂದೂ ಧರ್ಮದ ಬೋಧನೆಗಳಿಂದ ಹಿಂದಿನ ಕಾಲದಲ್ಲಿ ವಂಚಿತರಾಗಿದ್ದ ಎಲ್ಲ ಉಪೇಕ್ಷಿತ ವರ್ಗದವರಿಗೆ, ಉದಾರವಾದ ವೇದಸಂದೇಶವನ್ನು ಬೋಧಿಸುತ್ತದೆ. ಇದಕ್ಕೆ ಉದಾಹರಣೆಯನ್ನು ಶ್ರೀರಾಮಕೃಷ್ಣರ ಜೀವಿತದಲ್ಲೇ ಕಾಣಬಹುದು.

ಶ್ರೀರಾಮಕೃಷ್ಣರು ಮಹಿಳೆಯಾದ ಗೌರಿ ಮಾ ಅವರ ಸಂನ್ಯಾಸವನ್ನು ಸಮ್ಮತಿಸಿದರು ಮತ್ತು ಸಂನ್ಯಾಸಿನಿಯಾದ ಭೈರವಿ ಬ್ರಾಹ್ಮಣಿಯನ್ನು ತಮ್ಮ ಗುರುವಾಗಿ ಸ್ವೀಕರಿಸಿದರು. ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ಪುರುಷರು ಹಾಗೂ ಮಹಿಳೆಯರಿಗೂ ಸಂನ್ಯಾಸ ದೀಕ್ಷೆಯನ್ನಿತ್ತರು, ಉದಾ: ಅಭಯಾನಂದ, ಕೃಪಾನಂದ, ಸೋದರಿ ನಿವೇದಿತಾ ಮುಂತಾದವರು. ಶ್ರೀರಾಮಕೃಷ್ಣರ ಅನುಯಾಯಿಗಳಲ್ಲಿ ಇತರ ಪಂಗಡದವರೊಡನೆ ಸಹಭೋಜನ ಮಾಡುವುದು ಅತ್ಯಂತ ಸಹಜವಾದ ವಿಷಯ. ಅಂತರ್ಜಾತಿ ಮತ್ತು ಅಂತರ್ಧರ್ಮ ವಿವಾಹ ಕೂಡ ಇಲ್ಲಿ ನಿಷಿದ್ಧವಲ್ಲ. ಹೀಗೆ ಶ್ರೀರಾಮಕೃಷ್ಣರು ಬೋಧಿಸಿದ ಹಿಂದೂ



ಧರ್ಮ, ತನ್ನ ಸಾಮಾಜಿಕ ಮಿತಿಗಳಿಂದ ಹೊರಬಂದು, ತನ್ನೆಲ್ಲ ಆಧ್ಯಾತ್ಮಿಕ ಶಕ್ತಿಯನ್ನು ಒಗ್ಗೂಡಿಸಿ, ಬಲವಾಗಿ ಮುನ್ನುಗ್ಗುತ್ತಿರುವ ವಿಶ್ವಧರ್ಮವಾಗಿದೆ ಎನ್ನಬಹುದು. ಇದರಿಂದ ಆಕರ್ಷಿತರಾಗಿ, ಈಗಾಗಲೇ ವಿಶ್ವದ ನಾನಾ ಭಾಗಗಳಿಂದ, ಆಧ್ಯಾತ್ಮಿಕ ಅಭೀಪ್ಸೆ ಮತ್ತು ಸೇವಾಮನೋಭಾವವುಳ್ಳ ಅನೇಕ ಸ್ತ್ರೀಪುರುಷರು ಶ್ರೀರಾಮಕೃಷ್ಣರ ಹೆಸರಿನಲ್ಲಿ ಒಗ್ಗೂಡುತ್ತಿರುವುದನ್ನು ನಾವು ಕಾಣಬಹುದಾಗಿದೆ.

## ವಿವೇಕಾನಂದರ ವಿಶ್ವಸಂದೇಶ

ಸ್ವಾಮಿ ವಿವೇಕಾನಂದರು ೧೮೯೩ ರಲ್ಲಿ ಅಮೇರಿಕೆಯ ಷಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡಿ, ಧಾರ್ಮಿಕ ಜಗತ್ತಿನ ಮೇಲೆ ಎಂಥ ಪ್ರಭಾವ ಬೀರಿದರೆಂಬುದು ಈಗ ಇತಿಹಾಸವಾಗಿದೆ. ಇತರೆ ಧರ್ಮಗಳಿಗೆ, ಅಂದರೆ ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನ, ಮುಂತಾದ ಧರ್ಮಗಳಿಗೆ ಸೇರಿದ ಮುಖಂಡರು ತಮ್ಮ ತಮ್ಮ ಧರ್ಮಗಳ ಬಗ್ಗೆ ಮಾತನಾಡಿದರೆ, ಸ್ವಾಮಿ ವಿವೇಕಾನಂದರು, ಕೃಷ್ಣ ಹಾಗೂ ಕ್ರೈಸ್ತರ ಅನುಯಾಯಿಗಳಿಬ್ಬರನ್ನೂ ಒಳಗೊಳ್ಳುವ ವಿಶ್ವಧರ್ಮದ ಬಗ್ಗೆ ಮಾತನಾಡಿದರು. ಸಹಸ್ರಾರು ವರ್ಷಗಳಿಂದ ಭಾರತೀಯರು ಅನುಷ್ಠಾನಕ್ಕೆ ತಂದಿರುವುದೂ ಮತ್ತು ಇತರ ಧರ್ಮಗಳು ದೂರವಿಟ್ಟು ಹಿಂಸಿಸಿದವರಿಗೆ ಆಶ್ರಯವಿತ್ತಿರುವುದೂ ಆದ ವಿಶ್ವಧರ್ಮವೆಂದು ವೇದಾಂತವನ್ನು ಪ್ರಸ್ತುತಪಡಿಸಿದರು.

ಅನಂತರ ಅವರು ಧರ್ಮದ ಬಗ್ಗೆ ವಿಶ್ವದೃಷ್ಟಿ ಇರಬೇಕೆಂದು

ಮನವಿ ಮಾಡಿದರು ಮತ್ತು ಪ್ರಮುಖ ಧರ್ಮವೆನಿಸಿಕೊಂಡ ಪ್ರತಿ ಧರ್ಮವೂ ಈ ಸನಾತನ ವಿಶ್ವಧರ್ಮದ ಒಂದು ಪಾರ್ಶ್ವ ಮಾತ್ರ ಎಂದು ಹೇಳಿದರು. ಹೀಗಾಗಿ, ಪ್ರತಿಯೊಂದು ಧರ್ಮವೂ ಮಾನವಸಮಾಜದ ಒಂದು ಭಾಗಕ್ಕೆ ಬೇಕಾಗಿರುವುದೇ ಆಗಿದೆ. ಆದ್ದರಿಂದ ವಿವೇಕಾನಂದರ 'ವಿಶ್ವಧರ್ಮ' ಎನ್ನುವುದು ಇತರ ಧರ್ಮಗಳ ನಾಶವಲ್ಲ ಅಥವಾ ಯಾವುದೇ ಒಂದು ಧರ್ಮದ ಉಳಿವಿಗಾಗಿಯೂ ಅಲ್ಲ. ಆದರೆ, ಸಹೋದರರಂತೆ ಇತರರ ಅನುಭವಗಳನ್ನು ಹಂಚಿಕೊಂಡು ಶ್ರೀಮಂತವಾಗುತ್ತಾ, ಎಲ್ಲ ಧರ್ಮಗಳೂ ಒಟ್ಟಿಗೆ ಇರುವುದಕ್ಕಾಗಿಯೇ ರೂಪುಗೊಂಡಿದೆ. ಈ ವಿಶ್ವಾತ್ಮಕ ಚಿಂತನೆಯಲ್ಲಿ, ಮತಾಂತರ ಮಾಡುವುದು ಅನಾರೋಗ್ಯಕರವಷ್ಟೇ ಅಲ್ಲ, ಹಾನಿಕರ ಕೂಡ. ಏಕೆಂದರೆ ಅದು ಒಂದು ಧರ್ಮದ ಅನುಯಾಯಿಗಳಲ್ಲಿ, ಇತರ ಧರ್ಮದವರ ಬಗ್ಗೆ ಸಂದೇಹ, ಭಯ ಮತ್ತು ದ್ವೇಷಗಳನ್ನು ಹೆಚ್ಚಿಸುವುದು ಎಂಬ ಅಂಶದ ಬಗ್ಗೆ ಸ್ವಾಮಿ ವಿವೇಕಾನಂದರು ಪರಿಣಾಮಕಾರಿಯಾಗಿ ಎಲ್ಲರ ಗಮನ ಸೆಳೆದರು. ಅವರ ಮಾತುಗಳಲ್ಲೇ ಹೇಳುವುದಾದರೆ, "ಕ್ರೈಸ್ತನೊಬ್ಬ ಹಿಂದೂ ಅಥವಾ ಬೌದ್ಧನಾಗಬೇಕಾಗಿಲ್ಲ, ಹಿಂದೂ ಅಥವಾ ಬೌದ್ಧ, ಕ್ರೈಸ್ತನಾಗಬೇಕಾಗಿಯೂ ಇಲ್ಲ. ಆದರೆ ಪ್ರತಿಯೊಬ್ಬರೂ ಇತರ ಧರ್ಮದವರ ಮೂಲಾಂಶವನ್ನು ಹೀರಿಕೊಳ್ಳಬೇಕು; ಆದರೆ ಅದೇ ಸಮಯದಲ್ಲಿ ತಮ್ಮ ವೈಯಕ್ತಿಕತೆಯನ್ನೂ ಉಳಿಸಿಕೊಂಡು, ತಮ್ಮ ತಮ್ಮ ಬೆಳವಣಿಗೆಯ ನಿಯಮದಂತೆ ಬೆಳೆಯಬೇಕು."

## ವಿಶ್ವಸಂದೇಶದ ಸ್ವೀಕಾರ

ಹತ್ತೊಂಭತ್ತನೆ ಶತಮಾನದ ಪಾಶ್ಚಿಮಾತ್ಯ ಜಗತ್ತಿನ ಮಹಾನ್ ಪ್ರಾಚ್ಯಧರ್ಮ ವಿದ್ವಾಂಸರಲ್ಲೊಬ್ಬರಾದ ಪ್ರೊ. ಮ್ಯಾಕ್ಸ್ ಮುಲ್ಲರ್ ಅವರು ವಿಶ್ವಕ್ಕೆಲ್ಲ ಅನ್ವಯವಾಗುವ, ಸ್ವಾಮಿ ವಿವೇಕಾನಂದರಿಂದ ಬಹು ಪರಿಣಾಮಕಾರಿಯಾಗಿ ಬಿತ್ತರಗೊಂಡ, ಶ್ರೀರಾಮಕೃಷ್ಣರ ಬೋಧನೆಗಳಿಂದ ಬಹಳ ಪ್ರಭಾವಿತರಾಗಿದ್ದರು. ಅವರು ಶ್ರೀರಾಮಕೃಷ್ಣರ ಜೀವನ ಮತ್ತು ಬೋಧನೆಗಳ ಬಗ್ಗೆ "A Real Mahatman" (ಒಬ್ಬ ನಿಜವಾದ ಮಹಾತ್ಮ) ಎಂಬ ಪುಸ್ತಕವನ್ನು ಬರೆದರು. ಇದರಲ್ಲಿ ಅವರು ವೇದಗಳ ಸಾರವಾದ ಶ್ರೀರಾಮಕೃಷ್ಣರ ವಿಶ್ವೈಕ್ಯತೆ ಮತ್ತು ವಿಶ್ವಭ್ರಾತೃತ್ವದ ತತ್ತ್ವಗಳನ್ನು ಸ್ವಾಗತಿಸಿದರು. ಅದಲ್ಲದೆ, ಶ್ರೀರಾಮಕೃಷ್ಣರನ್ನು **'ಹತ್ತೊಂಭತ್ತನೆಯ ಶತಮಾನದ ಋಷಿವರೇಣ್ಯ'** ಎಂದೂ ಪ್ರಶಂಸಿಸಿದರು.

ಅವರ ಬಳಿಕ, ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ರೊಮೆ ರೊಲಾ ಅವರು ಕೂಡ ಶ್ರೀರಾಮಕೃಷ್ಣರನ್ನು "ಮೂವತ್ತು ಕೋಟಿ ಭಾರತೀಯರ ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಿಪೂರ್ಣತೆ" ಎಂದೂ, **'ನಮ್ಮ ಏಸುಕ್ರಿಸ್ತನ ತಮ್ಮ'** ಎಂದೂ ತುಂಬುಹೃದಯದಿಂದ ವರ್ಣಿಸಿದರು.ಅದಲ್ಲದೆ, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರನ್ನು **'ವಿಶ್ವಚೈತನ್ಯದ ಸ್ವರಮೇಳ'** ಎಂದು ಘೋಷಿಸಿದರು.

ಶ್ರೇಷ್ಠ ಇತಿಹಾಸಕಾರರಲ್ಲಿ ಒಬ್ಬರಾದ ಪ್ರೊ. ಆರ್ನಾಲ್ಡ್ ಟಾಯ್ನಬೀ ಅವರು ಶ್ರೀರಾಮಕೃಷ್ಣರ ಬೋಧನೆಗಳೇ **"ನಮ್ಮನ್ನು ನಾವು ನಾಶಪಡಿಸಿಕೊಳ್ಳದೇ ಇರುವುದಕ್ಕೆ ಇರುವ ಒಂದೇ ಒಂದು ಪರ್ಯಾಯ ಮಾರ್ಗ"** ಎಂದು ಬರೆದರು. ಆಲ್ಡಸ್ ಹಕ್ಸ್ಲಿ, ಕ್ರಿಸ್ಟೋಫರ್ ಇಷರ್‌ವುಡ್ ಮತ್ತು ಇತರ ಅನೇಕ ಪಾಶ್ಚಾತ್ಯ ವಿದ್ವಾಂಸರು, ಶ್ರೀರಾಮಕೃಷ್ಣರ ಬೋಧನೆಗಳು ವಿಶ್ವದೆಲ್ಲೆಡೆ ಜನಪ್ರಿಯವಾಗುತ್ತವೆ ಎಂಬ ಅಭಿಪ್ರಾಯದೊಡನೆ ಅವುಗಳನ್ನು ಸ್ವಾಗತಿಸಿದ್ದಾರೆ.

ಪ್ರೊ. ಹಸ್ಟನ್ ಸ್ಮಿತ್ ಅವರು, **'Bible of the World'** ('ಬೈಬಲ್ ಆಫ್ ದಿ ವರ್ಲ್ಡ್') ಎಂಬ ಕೃತಿಯಲ್ಲಿ ಪ್ರಪಂಚದ ವಿವಿಧ ಧರ್ಮಗ್ರಂಥಗಳ ಸಂಕಲನವನ್ನು ಮಾಡಿದ್ದಾರೆ. ೧೯೪೨ರಲ್ಲಿ ಮೊದಲ ಬಾರಿ ಪ್ರಕಟವಾದ ಆ ಪುಸ್ತಕ ಶ್ರೀರಾಮಕೃಷ್ಣರ ಕೆಳಗಿನ ಮಾತುಗಳಿಂದ ಆರಂಭವಾಗುತ್ತದೆ ಎನ್ನುವುದು ಗಮನಾರ್ಹ: "ಚಾವಣಿಗೆ ಏಣಿಯಿಂದಾದರೂ ಹತ್ತಬಹುದು, ಹಗ್ಗದ ಸಹಾಯದಿಂದಾಗಲಿ, ಮೆಟ್ಟಲುಗಳಿಂದಾಗಲಿ, ಹೋಗಬಹುದು." ಇನ್ನೊಂದು ಪ್ರಮುಖವಾದ ಅಂಶವೆಂದರೆ, ಆ ಸಂಕಲನ ಪ್ರಾರಂಭವಾಗುವುದೇ ವೇದೋಕ್ತಿಗಳಿಂದ.

## ರಾಮಕೃಷ್ಣ ಸಂಘ ಮತ್ತು ಜಾಗತೀಕರಣ

ಸ್ವಾಮಿ ವಿವೇಕಾನಂದರು ರಾಮಕೃಷ್ಣ ಸಂಘವನ್ನು ಒಂದು 'ವಿಶ್ವಪಥ' ಎಂಬಂತೆ ಆಲೋಚಿಸಿದರು. ಅವರು ಈ ಬಗ್ಗೆ 'ರಾಮಕೃಷ್ಣ ಮಠದ ನಿಯಮ ಮತ್ತು ನಿಬಂಧನೆ'ಗಳಲ್ಲಿ ಹೀಗೆ ಹೇಳಿದ್ದಾರೆ: 'ಈ ಕೇಂದ್ರದಿಂದ ಎದ್ದಿರುವ ಬೃಹತ್ತಾದ ಅಲೆ ಭೀಮಪ್ರವಾಹವಾಗಿ ಇಡಿ ಮಾನವಕೋಟಿಯನ್ನು ಆವರಿಸುವುದು ಮತ್ತು ಎಲ್ಲರನ್ನೂ ಮುಕ್ತಿಯತ್ತ ಕೊಂಡೊಯ್ಯುವುದು.'

ಪತ್ರಿಕೋದ್ಯಮಿಗಳಾದ ಶ್ರೀ ಎನ್. ನಾಗೇಶ್ವರನ್ ಅವರು 'ಎಕನಾಮಿಕ್ ಟೈಮ್ಸ್' ಪತ್ರಿಕೆಯಲ್ಲಿ ಬರೆದಿರುವ ಒಂದು ಗಮನಾರ್ಹ ಸಂಗತಿಯೊಡನೆ ಈ ಲೇಖನವನ್ನು ಮುಗಿಸುವೆವು: **"ನಮ್ಮ ಇಂದಿನ ಪ್ರಪಂಚಕ್ಕೆ ರಾಮಕೃಷ್ಣಸಂಘದ ಪ್ರಸ್ತುತತೆ ಸ್ಪಷ್ಟವಾಗಿದೆ. ಈಗಿನ ಕಂಪ್ಯೂಟರ್ ಯುಗ ನಮ್ಮ ಪುರುಷರ ಮತ್ತು ಸ್ತ್ರೀಯರ ಹೃದಯಗಳನ್ನು ನಿರ್ಜೀವಗೊಳಿಸಿದೆ. ಕೆಲವರ ಅಭಿವೃದ್ಧಿ ಮುಂದೆ ರಾಚುವಂತೆ ಎದ್ದು ಕಾಣುತ್ತಿದೆಯಾದರೂ ಮತ್ತೆ ಅನೇಕರ ಬಡತನ, ಪ್ರಕೃತಿಯ ಸಮತೋಲನದ ನಾಶ ಮತ್ತು ಅಣುಶಕ್ತಿಯ ಧ್ವಂಸದ ಅಂಚಿಗೆ ಪ್ರಪಂಚ ಬಂದು ನಿಂತಿದೆ. (ಇವುಗಳ ಮಧ್ಯೆ) ಮಾನವ ತನ್ನ ಅಸ್ತಿತ್ವವನ್ನು ಕಾಣದೆ ಕತ್ತಲಲ್ಲಿ ತಡಕಾಡುತ್ತಿದ್ದಾನೆ. ಈ ಸಮಸ್ಯೆಗಳನ್ನು ಪರಿಹರಿಸಲು ನಡೆಯುತ್ತಿರುವ ಪ್ರಯತ್ನಗಳ ಹಿಂದೆ, ಮಾನವನ ಪೂರ್ಣ ವ್ಯಕ್ತಿತ್ವದ ದೃಷ್ಟಿಕೋನ ಇಲ್ಲದಿರುವುದರಿಂದ ಅವೆಲ್ಲವೂ ವಿಫಲವಾಗಿವೆ. ಆದರೆ ಮತ್ತೊಂದೆಡೆ, ರಾಮಕೃಷ್ಣ ಸಂಘವು ಮಾನವನ ಸಂಪೂರ್ಣ ವ್ಯಕ್ತಿತ್ವವನ್ನು ಪರಿಗಣಿಸಿ ಇದೇ (ಈ ಸಮಸ್ಯೆಗಳನ್ನು ಪರಿಹರಿಸುವ) ಕೆಲಸವನ್ನೇ ಮಾಡುತ್ತಿದೆ. ಇದೊಂದೇ ಜಗತ್ತಿನ ಉಳಿವನ್ನು ಖಾತರಿಗೊಳಿಸುವುದು."**